ಶ್ರೀ ಹೆಚ್. ಡಿ. ಬಸವರಾಜ್ :– ಸನ್ಮಾನ್ಯ ಸಚಿವರಿಗೆ ಹೆಚ್ಚಿಗೆ ಮಾತನಾಡುವುದಕ್ಕೆ ಅವಕಾಶ ಕೊಟ್ಟಿದ್ದರೆ ಇನ್ನು ಚೆನ್ನಾಗಿ ಮಾತನಾಡುತ್ತಿದ್ದರೊ ಏನೋ, ನನಗೆ ಅವರು ಆ ಅವಕಾಶ ಕಳೆದುಕೊಂಡರಲ್ಲಾ ಎಂಬ ನೋವು.

ಬಾಗಲಕೋಟೆ ಕ್ಷೇತ್ರದಲ್ಲಿನ ಪಶುಸಂಗೋಪನಾ ಕೇಂದ್ರಗಳಿಗೆ ಪಶುವೈದ್ಯಕೀಯ ಔಷಧಿಗಳ ಸರಬರಾಜು ವ್ಯವಸ್ಥೆ

513 (6106) : **ಶ್ರೀ ಚರಂತಿಮಠ್ ವೀರಣ್ಣ ಚಂದ್ರಶೇಖರಯ್ಯ (ಬಾಗಲಕೋಟೆ)** : ಮಾನ್ಯ ಪಶುಸಂಗೋಪನೆ ಮತ್ತು ವಕ್ಫ್ ಸಚಿವರು ದಯವಿಟ್ಟು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ?

ಅ) ಬಾಗಲಕೋಟೆ ಕ್ಷೇತ್ರ ವ್ಯಾಪ್ತಿಯಲ್ಲಿರುವ ಪಶುಸಂಗೋಪನಾ ಕೇಂದ್ರಗಳಲ್ಲಿ ಪಶುಸಂಗೋಪನಾ ಔಷಧಿಗಳ ಸರಬರಾಜಿನಲ್ಲಿ ಕೊರತೆ ಇರುವ ವಿಚಾರ ಸರ್ಕಾರದ ಗಮನಕ್ಕೆ ಬಂದಿದೆಯೆ?

ಆ) ಹಾಗಿದ್ದಲ್ಲಿ, ಸೂಕ್ತ ಪ್ರಮಾಣದಲ್ಲಿ ಔಷಧಿಗಳ ಪೂರೈಕೆಗೆ ಸರ್ಕಾರದ ಕ್ರಮಗಳೇನು?

ಇ) ಉತ್ತರ ಕರ್ನಾಟಕದ ಜಾನುವಾರು ತಳಿಸಂವರ್ಧನೆಗೆ ಸರ್ಕಾರ ಕೈಗೊಂಡ ಕ್ರಮಗಳೇನು?

ಈ) ಪಶುಸಂಗೋಪನಾ ಇಲಾಖೆಯವರು ಪ್ರಸಕ್ತ ಸಾಲಿನಲ್ಲಿ ಬಾಗಲಕೋಟೆ ಕ್ಷೇತ್ರ ವ್ಯಾಪ್ತಿಯಲ್ಲಿ ಕೈಗೊಂಡ ಪಶುಅಭಿವೃದ್ಧಿ ಕಾರ್ಯಕ್ರಮಗಳ ವಿವರಗಳೇನು?

ಶ್ರೀ ಮಿರಾಜುದ್ದೀನ್ ಎನ್. ಪಟೇಲ್ (ಮಾನ್ಯ ಪಶುಸಂಗೋಪನೆ ಮತ್ತು ವಕ್ಫ್ ಸಚಿವರು) :

ಅ) – ಬಂದಿದೆ –

ಆ) ಔಷಧಿ ಖರೀದಿಗಾಗಿ ಅನುದಾನವನ್ನು ರೂ. 575 ಲಕ್ಷದಿಂದ ಪ್ರಸಕ್ತ ಸಾಲಿನಲ್ಲಿ ರೂ. 660 ಲಕ್ಷಗಳಿಗೆ ಹೆಚ್ಚಿಸಲಾಗಿದೆ.

2005–06ನೇ ಸಾಲಿನಲ್ಲಿ ಮೊದಲನೆಯ ಅರ್ಧ ವರ್ಷಕ್ಕೆ ರೂ. 302 ಲಕ್ಷಗಳ (ತೆರಿಗೆ ಹೊರತುಪಡಿಸಿ) ಔಷಧಿ ಸರಬರಾಜಿಗೆ ಈಗಾಗಲೇ ಬೇಡಿಕೆ ನೀಡಿದ್ದು, ಸದ್ಯದಲ್ಲಿ ಸರಬರಾಜಾಗಲಿದೆ. ಇದರಲ್ಲಿ ಬಾಗಲಕೋಟೆ ಕ್ಷೇತ್ರಕ್ಕೆ ಸಲ್ಲಬೇಕಾದ ಭಾಗವು ಸಹ ಸದ್ಯದಲ್ಲೆ ಸರಬರಾಜು ಆಗಲಿದೆ.

ಇ) 1. ಉತ್ತರ ಕರ್ನಾಟಕ ಭಾಗದ ಮುನಿರಾಬಾದ್ ಮತ್ತು ಧಾರವಾಡದಲ್ಲಿ ಇರುವ ಘನೀಕೃತ ವೀರ್ಯ ಉತ್ಪನ್ನ ಕೇಂದ್ರಗಳಲ್ಲಿ ಉತ್ತಮ ಗುಣಮಟ್ಟದ ಘನೀಕೃತ ವೀರ್ಯ ಉತ್ಪಾದಿಸಿ, ಈ ಭಾಗದ ಜಾನುವಾರುಗಳ ತಳಿ ಸಂವರ್ಧನೆಗೆ ಸರಬರಾಜು ಮಾಡಲು ಬಲಪಡಿಸಲಾಗಿದೆ.

2. ಉತ್ತರ ಕರ್ನಾಟಕದ ಎಲ್ಲಾ ಜಿಲ್ಲೆಗಳ 600 ಕೃತಕ ಗರ್ಭಧಾರಣ ಕಾರ್ಯಕರ್ತರಿಗೆ ಉನ್ನತ ತರಬೇತಿಯನ್ನು ನೀಡಿ, ಜಾನುವಾರು ಅಭಿವೃದ್ಧಿಗೆ ಪರಿಣಿತ ಸೇವೆಯು ದೊರಕುವಂತೆ ಮಾಡಲಾಗಿದೆ.

3. ಉತ್ತರ ಕರ್ನಾಟಕ್ಕ ಕೃತಕ ಗರ್ಭಧಾರಣ ಕೇಂದ್ರಗಳಿಗೆ 3 ಲೀಟರ್ ಸಾಮರ್ಥ್ಯದ 1265 ದ್ರವಸಾರಜನಕ ಜಾಡಿಗಳನ್ನು, 34 ಲೀಟರ್ ಸಾಮರ್ಥ್ಯದ 424 ದ್ರವಸಾರಜನಕ ಜಾಡಿಗಳನ್ನು, 500 ಲೀಟರ್ ಸಾಮರ್ಥ್ಯದ 5 ಜಾಡಿಗಳನ್ನು ಒದಗಿಸಿ, ರೈತನ ಮನೆ ಬಾಗಿಲಿಗೆ ಕೃತಕ ಗರ್ಭಧಾರಣೆ

ಲೀಟರ್ ಸಾಮರ್ಥ್ಯದ 5 ಜಾಡಿಗಳನ್ನು ಒದಗಿಸಿ, ರೈತನ ಮನೆ ಬಾಗಿಲಿಗೆ ಕೃತಕ ಗರ್ಭಧಾರಣೆ ಸೇವೆಯನ್ನು ಒದಗಿಸಲು ಕ್ರಮ ಕೈಗೊಳ್ಳಲಾಗಿದೆ.

4. ಉತ್ತಮ ಜರ್ಸಿ ಹೆಚ್, ಎಫ್, ಸುರ್ತಿ, ಮುರ್ರಾ ತಳಿಗಳಲ್ಲದೆ ಉತ್ತರ ಕರ್ನಾಟಕದ ದೇಶೀಯ ತಳಿಗಳಾದ ದೇವಣಿ ಮತ್ತು ಖಿಲ್ಲಾರ್ ತಳಿಗಳ ಘನೀಕೃತ ವೀರ್ಯವನ್ನು ಎಲ್ಲಾ ಕೃತಕ ಗರ್ಭಧಾರಣ ಕೇಂದ್ರಗಳಲ್ಲಿ ದೊರೆಯುವಂತೆ ಸೌಲಭ್ಯ ಒದಗಿಸಲಾಗಿದೆ.

5. ಕೃತಕ ಗರ್ಭಧಾರಣೆಯ ಬಗ್ಗೆ ಉತ್ತಮ ಅರಿವು ನೀಡುವ ಸಲುವಾಗಿ ಉತ್ತರ ಕರ್ನಾಟಕದ ಜಿಲ್ಲೆಯಲ್ಲಿ ಒಟ್ಟು 45000 ರೈತ/ರೈತ ಮಹಿಳೆಯರಿಗೆ 250 ರೈತರ ತರಬೇತಿ ಶಿಬಿರಗಳನ್ನು ನಡೆಸಲಾಗಿದೆ.

6. ಉತ್ತರ ಕರ್ನಾಟಕದ ಜಿಲ್ಲೆಗಳಲಿ ಒಟ್ಟು 250 ಬರಡು ರಾಸು ಚಿಕಿತ್ಸಾ ಶಿಬಿರಗಳನ್ನು ನಡೆಸಿ, ಬಂಜೆತನವಿರುವ 8000 ಕ್ಕೂ ಹೆಚ್ಚು ದನ ಮತ್ತು ಎಮ್ಮೆಗಳಿಗೆ ಚಿಕಿತ್ಸೆ ನೀಡಲಾಗಿದೆ.

ಈ) ಬಾಗಲಕೋಟೆ ಜಿಲ್ಲೆಯಲ್ಲಿ ಜಾನುವಾರುಗಳ ಅಭಿವೃದ್ದಿಗೆ ಈ ಕೆಳಕಂಡ ಕಾರ್ಯಕ್ರಮಗಳನ್ನು ಹಾಕಿಕೊಂಡಿದೆ.

1. ಆಸ್ಕಾಡ್ ಯೋಜನೆಯಡಿಯಲ್ಲಿ ಜಾನುವಾರುಗಳಿಗೆ ಗಳಲೆ ರೋಗ, ಕಾಲುಬಾಯಿಜ್ವರ ಹಾಗೂ ಪಿ.ಪಿ.ಆರ್. ರೋಗಗಳಿಗೆ ಲಸಿಕೆ ಹಾಕುವ ಕಾರ್ಯಕ್ರಮವನ್ನು ಹಮ್ಮಿಕೊಳ್ಳಲಾಗಿದ್ದು, ಇದಕ್ಕೆ ಪ್ರಸಕ್ತ ಸಾಲಿನಲ್ಲಿ ಬಾಗಲಕೋಟೆ ಜಿಲ್ಲೆಗೆ ರೂ. 4.85 ಲಕ್ಷಗಳನ್ನು ನಿಗಧಿಪಡಿಸಲಾಗಿದೆ.

ಹೆಚ್. ಎಸ್. ಇತ್ಯಾದಿ ಲಸಿಕೆಗಳನ್ನು ಉಚಿತವಾಗಿ ನೀಡಲಾಗುತ್ತಿದ್ದು, ದಿನಾಂಕ 01.07.2005 ರಿಂದ ಜಾರಿಗೆ ಬರುವಂತೆ ಕಾಲುಬಾಯಿ ಜ್ವರಗಳ ಲಸಿಕೆಯನ್ನು ಸಹ ಉಚಿತವಾಗಿ ನೀಡಲಾಗುತ್ತಿದೆ.

2. ಒಣ ಮೇವು ಪೌಷ್ಟೀಕರಣ ಯೋಜನೆಯಡಿ ಬಾಗಲಕೋಟೆಗೆ ರೂ. 1.60 ಲಕ್ಷಗಳು ನಿಗಧಿಯಾಗಿದ್ದು, ಈ ಯೋಜನೆಯಡಿಯಲ್ಲಿ ರೈತರಿಗೆ ಒಣ ಮೇವು ಪೌಷ್ಟೀಕರಣದ ಬಗ್ಗೆ ಪ್ರಾತ್ಯಕ್ಷತೆ ಶಿಬಿರಗಳನ್ನು ಏರ್ಪಡಿಸಲಾಗುವುದು, ಅಲ್ಲದೆ ಇದಕ್ಕೆ ಬೇಕಾಗಿರುವ ಸಾಮಗ್ರಿ/ಸಲಕರಣೆಗಳನ್ನು ರೈತರಿಗೆ ಉಚಿತವಾಗಿ ನೀಡಲಾಗುವುದು.

3. ಗೊಡ್ಡುರಾಸು ಶಿಬಿರಗಳನ್ನು ನಡೆಸಲು ಜಿಲ್ಲೆಗೆ ರೂ. 3.95 ಲಕ್ಷಗಳು ನಿಗದಿಯಾಗಿದ್ದು, ಈ ಯೋಜನೆಯಡಿಯಲ್ಲಿ ಬಂಜೆ ಹಾಗೂ ಇತರೆ ಜಾನುವಾರುಗಳಿಗೆ ಶಿಬಿರಗಳಲ್ಲಿ ಉಚಿತ ಚಿಕಿತ್ಸೆ ನೀಡಲಾಗುವುದು.

4. ಜಾನುವಾರು ಅಬಿವೃದ್ದಿಗಾಗಿ ವಿಸ್ತರಣಾ ಚಟುವಟಿಕೆಗಳನ್ನು ಹಮ್ಮಿಕೊಳ್ಳಲಾಗಿದ್ದು, ಪ್ರಸಕ್ತ ಸಾಲಿನಲ್ಲಿ ಈ ಕಾರ್ಯಕ್ರಮಕ್ಕೆ ರೂ. 0.31 ಲಕ್ಷಗಳು ನಿಗದಿಯಾಗಿರುತ್ತದೆ.

5. ಜಾನುವಾರುಗಳ ವಿವಿಧ ರೋಗಗಳಿಗೆ ಚಿಕಿತ್ಸೆ ನೀಡುವ ದೃಷ್ಟಿಯಿಂದ ಔಷಧಿ ಮತ್ತು ರಾಸಾಯನಿಕಗಳನ್ನು ಖರೀದಿಸಲು ಪ್ರಸಕ್ತ ಸಾಲಿನಲ್ಲಿ ಜಿಲ್ಲಾವಲಯದಲ್ಲಿ ಬಾಗಲಕೋಟೆ ಜಿಲ್ಲೆಗೆ ರೂ. 17.00 ಲಕ್ಷ ನಿಗದಿಪಡಿಸಲಾಗಿದೆ.

ಶ್ರೀ ಚರಂತಿಮಠ್ ವೀರಣ್ಣ ಚಂದ್ರಶೇಖರಯ್ಯ :– ಮಾನ್ಯ ಉಪಾಧ್ಯಕ್ಷರೇ, ಅವರು ಬಾಗಲಕೋಟೆ ಕ್ಷೇತ್ರ ವ್ಯಾಪ್ತಿಯಲ್ಲಿರುವ ಪಶುಸಂಗೋಪನಾ ಕೇಂದ್ರಗಳಲ್ಲಿ ಪಶುಸಂಗೋಪನಾ ಔಷಧಿಗಳ ಸರಬರಾಜಿನಲ್ಲಿ ಕೊರತೆ ಇರುವ ವಿಚಾರ ಸರ್ಕಾರದ ಗಮನಕ್ಕೆ ಬಂದಿದೆಯೇ ಎಂದು ಕೇಳಿದ್ದಕ್ಕೆ ಬಂದಿದೆ ಎಂದು ಹೇಳಿದ್ದಾರೆ. ಏನು ಕ್ರಮ ತೆಗೆದುಕೊಂಡಿದ್ದೀರಿ ಎಂದರೆ, ಇಡಿ ರಾಜ್ಯದಲ್ಲಿ

575 ಲಕ್ಷ ರೂಪಾಯಿಗಳಿಂದ 660 ಲಕ್ಷ ರೂಪಾಯಿಗಳಿಗೆ ಬಜೆಟನ್ನು ಹೆಚ್ಚಿಸಲಾಗಿದೆ ಎಂದೂ ಅದರ ಅರ್ಧದಷ್ಟು 302 ಲಕ್ಷ ರೂಪಾಯಿಗಳಿಗೆ ಆರ್ಡರ್ ಪ್ಲೇಸ್ ಮಾಡಿದ್ದೇವೆ ಎನ್ನುವ ಉತ್ತರವನ್ನು ಇಲ್ಲಿ ಕೊಟ್ಟಿದ್ದಾರೆ. ನನಗೆ ಬೇಕಾಗಿರುವುದು ಆ ಉತ್ತರ ಅಲ್ಲ. ನಮ್ಮ ಕ್ಷೇತ್ರದಲ್ಲಿ ಔಷಧಿಗಳ ಸರಬರಾಜಿನಲ್ಲಿ ಕೊರತೆ ಇದೆ ಎಂದು ಬಂದ ಮೇಲೆ, ಮಳೆಗಾಲ ಪ್ರಾರಂಭ ಆದ ಮೇಲೆ ಜಾನುವಾರುಗಳಿಗೆ ಅನೇಕ ರೋಗಗಳು ಬರುತ್ತಿರುವುದು ಎಲ್ಲರಿಗೂ ಗೊತ್ತಿರುವ ವಿಷಯ. ಅದನ್ನು ಏಕೆ ಮೊದಲೇ ಸರಬರಾಜು ಮಾಡುವುದಿಲ್ಲ ಎನ್ನುವುದು ಒಂದು ನನ್ನ ಪ್ರಶ್ನೆ. ಎರಡನೆಯದು ಬಾಗಲಕೋಟೆ ಕ್ಷೇತ್ರ ವ್ಯಾಪ್ತಿಯಲ್ಲಿ ಕೈಗೊಂಡ ಪಶು ಅಭಿವೃದ್ಧಿ ಕಾರ್ಯಕ್ರಮಗಳು ಎಂದರೆ ಅವರು ಜಾನುವಾರು ಅಭಿವೃದ್ಧಿಗಾಗಿ ಇಡೀ ಜಿಲ್ಲೆಯ ಉತ್ತರ ಕೊಟ್ಟಿದ್ದಾರೆ. ನನಗೆ ಜಿಲ್ಲೆಯ ಉತ್ತರ ಬೇಕಾಗಿರಲಿಲ್ಲ. ನಾನು ಕೇಳಿದ್ದು ನನ್ನ ಕ್ಷೇತ್ರ ವ್ಯಾಪ್ತಿಗೆ ಸೀಮಿತವಾದ ಪ್ರಶ್ನೆ. ಬಾಗಲಕೋಟೆ ತಾಲ್ಲೂಕಿಗೆ ಈ ಕಾರ್ಯಕ್ರಮಕ್ಕೆ 0.31 ಲಕ್ಷ ರೂಪಾಯಿಗಳನ್ನು ಕೊಡುತ್ತೇವೆಂದು ಹೇಳಿದ್ದಾರೆ. ಆದರೆ ಅಲ್ಲಿ ಅಧಿಕಾರಿಗಳನ್ನು ಕೇಳಿದರೆ ಅಲ್ಲಿ ಯಾವುದೇ ಔಷಧಿಗಳ ಸರಬರಾಜು ಇರುವುದಿಲ್ಲ ಎಂದು ಹೇಳುತ್ತಾರೆ. ನಾವು ಹತ್ತಾರು ಸಾರಿ ಆಸ್ಪತ್ರೆಗಳಿಗೆ ಹೋಗುತ್ತೇವೆ, ಅವರನ್ನು ಕರೆಸಿ ಕೇಳುತ್ತೇವೆ, ಸರ್ಕಾರದಿಂದ ಔಷಧಿಗಳು ಬಂದಿಲ್ಲ. ಬೇಕಾದರೆ ನೀವು ಔಷಧಿಗಳನ್ನು ತಂದು ಕೊಡಿ ನಾವು ಟ್ರೀಟ್‌ಮೆಂಟ್ ಕೊಡುತ್ತೇವೆನ್ನುವ ಮಾತನ್ನು ಹೇಳುತ್ತಾರೆ. ಅನೇಕ ಕಡೆ ನಮ್ಮ ಆಸ್ಪತ್ರೆಗಳಲ್ಲಿ ಡಾಕ್ಟರ್‌ಗಳು ಇಲ್ಲ. ಸಿಬ್ಬಂದಿ ಇಲ್ಲ. ಈ ರೀತಿ ಒಂದು ಅನಿಶ್ಚಿತವಾದ ವಾತಾವರಣದಲ್ಲಿ ಇರುವುದರಿಂದ ಅದು ಮುಳುಗಡೆ ಪ್ರದೇಶ ಆಗಿರುವುದರಿಂದ ಅನೇಕ ರೋಗ ರುಜಿನಗಳಿಗೆ ನಮ್ಮ ಜಾನುವಾರುಗಳು ತುತ್ತಾಗುತ್ತವೆ. ಕನಿಷ್ಟ ಇನ್ನು ಎರಡು–ಮೂರು ಆಸ್ಪತ್ರೆಗಳನ್ನು ತೆಗೆದು, ಅಲ್ಲಿರುವಂತಹ ಆಸ್ಪತ್ರೆಗಳಿಗೆ ಸಿಬ್ಬಂದಿ ಒದಗಿಸಿ ಕೊಡುವಂತಹ ಪ್ರಯತ್ನವನ್ನು ಮಾನ್ಯ ಸಚಿವರು ಮಾಡುತ್ತಾರಾ ಎಂದು ಮಾನ್ಯ ಉಪಾಧ್ಯಕ್ಷರ ಮೂಲಕ ನಾನು ತಮಗೆ ಕೇಳುವುದಕ್ಕೆ ಇಚ್ಛೆ ಪಡುತ್ತೇನೆ.

ಶ್ರೀ ಮಿರಾಜುದ್ದೀನ್ ಎನ್. ಪಟೇಲ್ (ಪಶುಸಂಗೋಪನೆ ಹಾಗೂ ವಕ್ಫ್ ಸಚಿವರು) : ಮಾನ್ಯ ಉಪಾಧ್ಯಕ್ಷರೆ, ಮಾನ್ಯ ಸದಸ್ಯರು ಕೇಳಿದ್ದು ಏನಿದೆ ಎಂದರೆ, ಅವರ ಕ್ಷೇತ್ರದಲ್ಲಿ ಎಷ್ಟು ಔಷಧಿ ಬೇಕಾಗಿದೆ, ಅಷ್ಟು ಔಷಧಿ ಸರ್ಕಾರ ಸರಬರಾಜು ಮಾಡುತ್ತಿಲ್ಲ ಎಂದು ಹೇಳಿದರು, ಹಾಗೆಯೇ ಔಷಧಿಗಳನ್ನು ಸರಬರಾಜು ಮಾಡುವ ವ್ಯವಸ್ಥೆ ಮಾಡಿಕೊಡಬೇಕೆಂದು ಹೇಳಿದರು. ಎರಡನೆಯದು ಅಲ್ಲಿ ಎಷ್ಟು ಆಸ್ಪತ್ರೆಗಳಿವೆ ಅದಕ್ಕೆ ಡಾಕ್ಟರ್‌ಗಳು ಇಲ್ಲ, ಮೂರನೆಯದು ಹೊಸ ಆಸ್ಪತ್ರೆಗಳನ್ನು ಓಪನ್ ಮಾಡಿಕೊಡಬೇಕೆಂದು ಕೇಳಿದರು. ಮೆಡಿಸಿನ್‌ಗಳಿಗೆ ಮೊದಲು ನಮ್ಮ ಬಜೆಟ್ ಅಮೌಂಟ್ ಐದು ಕೋಟಿ ರೂ. ಇತ್ತು, ಈ ವರ್ಷ ನಮ್ಮ ಬಜೆಟ್ ಅಮೌಂಟ್ 10 ಕೋಟಿ ರೂಪಾಯಿಗಳಿಗೆ ಡಬಲ್ ಆಗಿದೆ. ನಮ್ಮ ಡಾಟಾ ಪ್ರಕಾರ ಈಜ್ ಕ್ಯಾಟಲ್‌ಗೆ 3.60 ಪೈಸೆಯ ಔಷಧಿ ಸರಬರಾಜು ಮಾಡಬೇಕು ಎಂದು ಇದೆ. ನಮ್ಮ ರಾಜ್ಯದಲ್ಲಿ ಟೋಟಲ್ ಕ್ಯಾಟಲ್ ಪಾಪುಲೇಷನ್ ಇರುವುದು 2.4 ಕೋಟಿ, ಹಾಗೂ ಫೌಲ್ಟ್ರಿ 2.5 ಕೋಟಿ ಇದೆ. ನಮ್ಮ ಟೋಟಲ್ ಬಜೆಟ್ ಐದು ಕೋಟಿ ರೂಪಾಯಿಗಳು ಇವೆ. ಈಗ ಬಜೆಟ್ ಹೆಚ್ಚಿಗೆ ಮಾಡಿರುವುದರಿಂದ ಎಲ್ಲೆಲ್ಲಿ ಎಷ್ಟು ರಿಕ್ವೈರ್‌ಮೆಂಟ್ ಇದೆ, ಅಷ್ಟು ಔಷಧಿ ಸರಬರಾಜು ಮಾಡುವ ವ್ಯವಸ್ಥೆ ಮಾಡಿದ್ದೇವೆ. ಕೆಲವರು ಸಪ್ಲೇ ಮಾಡುವವರಿಗೆ ಇಂಡೆಂಟ್ ಕೊಟ್ಟ ಮೇಲೆ, ಕೆಲವರು ಇನ್ ಟೈಮ್ ಸಪ್ಲೇ ಮಾಡುವುದಿಲ್ಲ, ಅದಕ್ಕೆ ಸ್ವಲ್ಪ ಡಿಲೇ ಆಗಿರಬಹುದು, ಅದನ್ನು ಸರಿಯಾಗಿ ಸೆಪ್ಲೇ ಮಾಡುವ ವ್ಯವಸ್ಥೆ ಮಾಡುತ್ತೇವೆ. ಎರಡನೆಯದು ಡಾಕ್ಟರ್‌ಗಳ ಸಮಸ್ಯೆ. 1024 ಡಾಕ್ಟರ್‌ಗಳ ಹುದ್ದೆಗಳು ಅಲ್ಲಿ ಖಾಲಿ ಇವೆ, ಮೊನ್ನೆ ಕಳೆದ ತಿಂಗಳು

ಕ್ಯಾಬಿನೆಟ್ ಸಬ್ ಕಮಿಟಿಯಲ್ಲಿ 2500 ಪೋಸ್ಟ್‌ಗಳನ್ನು ಭರ್ತಿ ಮಾಡಬೇಕೆಂದು ಅಪ್ರೂವಲ್ ಕೊಟ್ಟಿದ್ದಾರೆ. ಅದರಲ್ಲಿ ನಾವು ಈಗಾಗಲೇ ಪ್ರೋಸೆಸ್ ಪ್ರಾರಂಭ ಮಾಡಿ 250 ಡಾಕ್ಟರ್‌ಗಳಿಗೆ ಕಾಲ್ಫಾರ್ ಮಾಡಿ ವೆರಿಫಿಕೇಷನ್ ಮುಗಿದಿದೆ. ಒಂದು ತಿಂಗಳೊಳಗೆ 250 ಡಾಕ್ಟರ್‌ಗಳ ಪೋಸ್ಟಿಂಗ್ ಆಗುತ್ತದೆ, ಅದರಲ್ಲಿ ನಿಮ್ಮ ಕ್ಷೇತ್ರದಲ್ಲಿ ಎಲ್ಲೆಲ್ಲಿ ಖಾಲಿ ಇದೆ ಅಲ್ಲಿ ಕೊಡುತ್ತೇವೆ. ಹೊಸ ಆಸ್ಪತ್ರೆಗಳನ್ನು ಕೊಡುವ ವಿಚಾರದಲ್ಲಿ 69 ಹೊಸ ಆಸ್ಪತ್ರೆಗಳನ್ನು ಕೊಡಬೇಕೆಂದು ಅಪ್ರೂವಲ್ ಕೊಟ್ಟಿದ್ದೇವೆ. ಅದು ಮೋಸ್ಟ್ ಬ್ಯಾಕ್‌ವರ್ಡ್ ತಾಲ್ಲೂಕುಗಳಿಗೆ ಕೊಡಬೇಕೆಂದು ಇದೆ. ಮೋಸ್ಟ್ ಬ್ಯಾಕ್‌ವರ್ಡ್ ತಾಲ್ಲೂಕುಗಳ ಪಟ್ಟಿಯಲ್ಲಿ ನಿಮ್ಮ ತಾಲ್ಲೂಕು ಬರುತ್ತದೆ ಎಂದರೆ ಅಲ್ಲಿ ಮಾಡಿ ಕೊಡುತ್ತೇವೆ. ಇಲ್ಲವೆಂದರೆ ನಿಮಗೆ ಬಿಲ್ಡಿಂಗ್ ಬೇಕಾದರೆ ಬಿಲ್ಡಿಂಗ್ ಕೊಡುತ್ತೇವೆ, ಎಲ್ಲಾ ಕ್ಷೇತ್ರಗಳಲ್ಲಿ ಒಂದೆರಡು ಆಪ್‌ಗ್ರಡೇಷನ್ ಮಾಡಿಕೊಡುತ್ತೇವೆ. ಸುಮಾರು 10,20 ವರ್ಷಗಳಿಂದ ಆಗದೆ ಇರುವ ಕೆಲಸವನ್ನು ನಾವು ಒಂದು ವರ್ಷದಲ್ಲಿ ಮಾಡಿದ್ದೇವೆ. 192 ಡಾಕ್ಟರ್‌ಗಳನ್ನು ಪರ್ಮನೆಂಟ್ ಮಾಡಿದ್ದೇವೆ, 316 ಅಸಿಸ್ಟೆಂಟ್ ಇನ್ಸ್‌ಪೆಕ್ಟರ್ಸ್ ಪರ್ಮನೆಂಟಾಗಿ ಮಾಡಿದ್ದೇವೆ. 250 ಡಾಕ್ಟರ್‌ಗಳನ್ನು ಕರೆಸಿ ಹೊಸದಾಗಿ ಯೂನಿವರ್ಸಿಟಿ ಮಾಡಿದ್ದೇವೆ. ವ್ಯಾಕ್ಸಿನ್ ಎಲ್ಲಾ ಫ್ರೀ ಮಾಡಿದ್ದೇವೆ. Even foot and mouth ಔಷಧಿ ಆದರೂ ಅದನ್ನೂ ಫ್ರೀ ಆಗಿ ಕೊಡಬೇಕೆಂದು ಮಾಡಿದ್ದೇವೆ. ಷಿಪ್ ಮತ್ತು ಬೋಟ್ ಮೇಲಿನ ಇನ್‌ಶ್ಯೂರೆನ್ಸ್ ಕೂಡ ಮಾಡಿದ್ದೇವೆ. ಇಷ್ಟೆಲ್ಲಾ ಕೆಲಸವನ್ನು ನಾವು ಮಾಡಿದ್ದೇವೆ. ನಮ್ಮ ಸರ್ಕಾರಕ್ಕೆ ಮತ್ತು ನನಗೆ ನೀವೆಲ್ಲಾ ಅಪ್ರೀಷಿಯೇಟ್ ಮಾಡಬೇಕಾಗಿದೆ. ನಿಮ್ಮ ಕೆಲವು ಸಮಸ್ಯೆಗಳು ಏನಿವೆ ಅದನ್ನೂ ಕೂಡ ನಾವು ಮಾಡಿ ಕೊಡುತ್ತೇವೆ.

ಶ್ರೀ ಚರಂತಿಮಠ್ ವೀರಣ್ಣ ಚಂದ್ರಶೇಖರಯ್ಯ :– ಮಾನ್ಯ ಉಪಾಧ್ಯಕ್ಷರೇ, ನೀವು ವಿಶ್ವವಿದ್ಯಾನಿಲಯ ಮಾಡಿದ್ದು, ಪಾರ್ಟ್ ಟೈಮ್ ಇದ್ದವರನ್ನು ಪರ್ಮನೆಂಟ್ ಮಾಡಿದ್ದು ಅದು ಬೇರೆ ವಿಷಯ. ಆದರೆ ನಮ್ಮಲ್ಲಿ ಬ್ಯಾಕ್‌ವಾಟರ್ ನೀರು ನಿಲ್ಲುವುದರಿಂದ ಜಾನುವಾರುಗಳಿಗೆ ಅನೇಕ ರೋಗ ರುಜಿನಗಳು ಉಂಟಾಗುತ್ತಿವೆ, ಮೊದಲು ಅಲ್ಲಿ ಡಾಕ್ಟರ್‌ಗಳನ್ನು ಹಾಕಿ, ಅಲ್ಲಿ ಸಂಚಾರಿ ಆಸ್ಪತ್ರೆಗಳನ್ನಾದರೂ ಪ್ರಾರಂಭ ಮಾಡಿ, ನಿಮಗೆ ಅಭಿನಂದನೆ ಸಲ್ಲಿಸುವುದು ಬೇರೆ, ನಮ್ಮ ಕ್ಷೇತ್ರದ ಸಮಸ್ಯೆ ನಾನು ಹೇಳುತ್ತಿದ್ದೇನೆ.

ಶ್ರೀ ಮಿರಾಜುದ್ದೀನ್ ಎನ್. ಪಟೇಲ್ :– ಅದನ್ನೂ ನಾವು ಹೇಳಬೇಕಾಗಿದೆ, ಮತ್ತು ನಾವು ಮಾಡಿದ ಕೆಲಸವನ್ನು ಸಹ ಹೇಳಬೇಕಾಗಿದೆ. ನಾವು ಈ ಸದನಕ್ಕೆ ತಿಳಿಸದೆ ಇದ್ದರೆ ಮತ್ತೆ ಯಾರಿಗೆ ತಿಳಿಸಬೇಕು? ಔಷಧಿ ಹಾಗೂ ಡಾಕ್ಟರ್‌ಗಳ ಯಾವುದೇ ಕೊರತೆ ಆಗದ ಹಾಗೆ ಮಾಡುತ್ತೇವೆ.

ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡಗಳ ಅಭಿವೃದ್ಧಿ ನಿಗಮದ ಫಲಾನುಭವಿಗಳು

514 (5916) : ಶ್ರೀ ಪದ್ಮನಾಭ ಕೊಟ್ಟಾರಿ. ಕೆ. (ಏಟ್ಲ): ಮಾನ್ಯ ಸಮಾಜ ಕಲ್ಯಾಣ ಸಚಿವರು ದಯವಿಟ್ಟು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ?

ಅ) 2003–04 ಮತ್ತು 2004–05ನೇ ಸಾಲಿಗೆ ಅನ್ವಯವಾಗುವಂತೆ, ದಕ್ಷಿಣ ಕನ್ನಡ ಜಿಲ್ಲೆಯ ಎಷ್ಟು ಫಲಾನುಭವಿಗಳಿಗೆ, ಯಾವ ಯಾವ ಯೋಜನೆಯಡಿಯಲ್ಲಿ ಎಷ್ಟೆಷ್ಟು ಮೊತ್ತದ ಹಣವನ್ನು ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡಗಳ ಅಭಿವೃದ್ಧಿ ನಿಗಮವು ನೀಡಿದೆ;

ಆ) ನಿಗಮವು ತನ್ನ ಯೋಜನೆಯ ಅನುಷ್ಠಾನಕ್ಕಾಗಿ ಫಲಾನುಭವಿಗಳನ್ನು ಆಯ್ಕೆ ಮಾಡಲು ಅನುಸರಿಸುವ ವಿಧಾನಗಳು ಯಾವುವು: ನಿಗಮವು ತನ್ನ ಕಾರ್ಯ ವ್ಯಾಪ್ತಿಯನ್ನು ವಿಸ್ತರಿಸಿಕೊಂಡು ಸದರಿ ಜನಾಂಗಗಳ ಏಳಿಗೆಗಾಗಿ ಶ್ರಮಿಸಲು ರೂಪಿಸಿಕೊಂಡ ಯೋಜನೆಗಳೇನು?